**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಓ ಎಸ್ ನಂ. 67/2026**

**ಪಿ.ಡಬ್ಲ್ಯೂ 1**

**ದಿನಾಂಕಃ15.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| Name of witness | Siddappa Melagiri |
| Father's Name | Dyamanna |
| Age | 48 Years |
| Designation | Agriculture |
| Place | Galagi Hulakoppa |

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಮಾನ್ಯ ಎ.ಜಿ.ಪಿ ರವರಿಂದ**

ನಾನು 5 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ವಾರಸಾ ಪ್ರಮಾಣ ಪತ್ರ ಸಲುವಾಗಿ ಈ ದಾವೆಯನ್ನು ಹೂಡಿದ್ದೇನೆ. ನನ್ನ ತಂದೆಗೆ ಇಬ್ಬರು ಹೆಂಡತಿಯರು. ಸದರಿಯವರ ಹೆಸರು ಕೃಷ್ಣಮ್ಮ ಮತ್ತು ಸೋನಮ್ಮ. ಕೃಷ್ಣಮ್ಮರವರು ಪೋತಿಯಾಗಿದ್ದಾರೆ. ನಾನು ಸೋನಮ್ಮರವರ ಮಗ. ನನ್ನ ಮೊದಲನೇ ಹೆಂಡತಿಯಾದ ಕೃಷ್ಣಮ್ಮರವರಿಗೆ ಮಕ್ಕಳು ಇಲ್ಲ. ನನ್ನ ತಾಯಿಗೆ ನನ್ನನ್ನು ಹೊರತುಪಡಿಸಿ ಮೂರು ಜನ ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. 2011 ನೇ ಇಸ್ವಿಯಲ್ಲಿ ಮತ್ತು ಸದರಿಯವರ ಮೊದಲನೇ ಹೆಂಡತಿಯಾದ ಕೃಷ್ಣಮ್ಮರವರ 2018 ನೇ ಇಸ್ವಿಯಲ್ಲಿ ಪೋತಿಯಾಗಿರುತ್ತಾರೆ.

ನಾನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ನನ್ನ ವಾರಸಾ ಪ್ರಮಾಣ ಪತ್ರವನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಾಧಿಕಾರದವರು ಸ್ಥಾನಿಕ ಪರಿಶೀಲನೆ ಮಾಡಿ ನನ್ನ ತಂದೆಗೆ ಇಬ್ಬರು ಹೆಂಡತಿಯರು ಇರುವ ಕಾರಣ ವಾರಸಾ ಪ್ರಮಾಣ ಪತ್ರವನ್ನು ನೀಡಲು ಬರುವುದಿಲ್ಲ ಎಂದು ಹೇಳಿ ನಮೂದು ಮಾಡಿ ಹಿಂಬರಹವನ್ನು ನೀಡಿದ್ದಾರೆ ಎಂದರೆ ಸರಿ. ನನ್ನ ತಂದೆಯ ಮೊದಲನೇ ಹೆಂಡತಿಯಾದ ಕೃಷ್ಣಮ್ಮ ರವರಿಗೆ ಮಕ್ಕಳು ಇದ್ದರೂ ಸಹ ಅದನ್ನು ಮರೆಮಾಚಿ ನ್ಯಾಯಾಲಯದಲ್ಲಿ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಕಾರಣಗಳು ಇಲ್ಲದೇ ಇದ್ದರೂ ಸುಳ್ಳು ದಾವಾ ಕಾರಣಗಳನ್ನು ಸೃಷ್ಟಿ ಮಾಡಿ ಇಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮನೆತನದ ನಿಜವಾದ ಹೆಸರು ''ಮೇಲಗೇರಿ" ಎಂದು ಇರುತ್ತದೆ. ನನ್ನ ಮನೆತನದ ಹೆಸರು ''ಮೇಲಗೇರಿ'' ಮತ್ತು ''ಮೇಲಗಿರಿ'' ಎಂದು ಇದೆ ಎಂದರೆ ಸರಿ. ಸದರಿ ಅಡ್ಡ ಹೆಸರುಗಳು ನನ್ನದೇ ಎಂದು ರುಜುವಾತು ಪಡಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

**ಮರು-ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**